# ಚಿಕ್ಕವನೇ ಇವನು ನಮ್ಮ ಕೈಗೆ ಸಿಕ್ಕದೆ ಓಡುವನು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 236.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 113.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** The wordings mentioned here are as per Ref. 1. The wordings in Ref. 2 are mostly same as in Ref. 1. Few differences which are there in Ref. 2 are not considered here
5. **Note:** Singer has followed these lyrics.

ರಾಗ: ಮೋಹನ ಕಲ್ಯಾಣಿ ತಾಳ: ಅಟ

ಚಿಕ್ಕವನೇ ಇವನು, ನಮ್ಮ ಕೈಗೆ
ಸಿಕ್ಕದೆ ಓಡುವನು || ಪ ||

ಅಕ್ಕಯ್ಯ ಮಕ್ಕಳು ಹುಟ್ಟುವ ಮರ್ಮವ
ಘಕ್ಕನೆ ಎನಕೂಡೆ ಹೇಳು ಹೇಳೆನುತಾನೆ || ಅಪ ||

ನೀರಿಗೆ ಹೋಗುವಾಗ ನಿಂತುಕೊಂಡು
ಯಾರು ಇಲ್ಲದೆ ಕರೆವ
ದಾರಿಯಡ್ಡವ ಕಟ್ಟಿ ಕೂಡಿಕೊ ಎನುತಲೆ
ಹೋರಾಟವ ಮಾಡಿ ಹೋಗಾಡಿಸಿದನಮ್ಮ || 1 ||

ಮೊಸರನ್ನ ಕಡೆಯುವಾಗ ಬೆನ್ನಿಲಿ ಬಂದು
ಕಣ್ಣಮುಚ್ಚಿ ಕಾಡುವ
ಬೆಣ್ಣೆಯ ತಾರೆಂದು ಕುಚಗಳ ಪಿಡಿಯುತ
ಬಣ್ಣಿಸಿ ಬಣ್ಣಿಸಿ ಪ್ರಣಯ ಮಾಡಿದನಮ್ಮ || 2 ||

ನಿದ್ದೆ ಕಣ್ಣಿಲಿ ನಾನಿದ್ದೆ ಗಂಡನೆಂದು
ಬುದ್ಧಿಯಿಲ್ಲದೆ ಕೂಡಿದೆ
ಎದ್ದು ನೋಡಲು ಅವನ ಎಡಗಯ್ಯ ಪಿಡಿಯುತ್ತ
ಮುದ್ದು ಶ್ರೀ ಪುರಂದರ ವಿಠಲ ಕಾಣಮ್ಮ || 3 ||

**Classification:** Keerthane
**Ankita:** sri purandara vittala
**Location:** NA
**Category:** Krishna Stuti
**Sub-Category:** Krishna, kai, huttu, makkalu, niru, dari, kannu, benne, nidde, pati, buddi,
**Pravachana:** NA
**Explanation:** NA